# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ : 103**

**ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 09.12.2024**

**ಉತ್ತರಿಸುವ ಸಚಿವರು : ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಸುಧಾರಣೆ ಮತ್ತು ಅನುದಾನ ಬಿಡುಗಡೆಗೆ ಸರಕಾರ ಅನುಸರಿಸುತ್ತಿರುವ ಆದ್ಯತಾ ಮಾನದಂಡಗಳೇನು: ಈ ಆದ್ಯತೆಗಳನ್ನು ನಿರ್ಧರಿಸುತ್ತಿರುವವರಾರು: (ವಿವರ ನೀಡುವುದು) | ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಸ್ಥಿತಿಗತಿಗಳನ್ನು ಇಲಾಖಾ ತಂತ್ರಾಂಶವಾದ SATS ನಲ್ಲಿ ಇಂಧೀಕರಿಸುವ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇದರ ಆಧಾರದ ಮೇಲೆ 1:40 (ಮಕ್ಕಳ ಸಂಖ್ಯೆ) ಅನುಪಾತದಲ್ಲಿ ಅತಿ ಹೆಚ್ಚು ಮಕ್ಕಳ ಸಂಖ್ಯೆ ಇರುವ ಶಾಲೆಗಳಿಗೆ ಆದ್ಯತೆ ನೀಡಿ, ಬೇಡಿಕೆಗೆ ಅನುಗುಣವಾಗಿ ಶಾಲೆಗಳನ್ನು ಆಯ್ಕೆಮಾಡಿ ಕೊಠಡಿಗಳನ್ನು ಹಂಚಿಕೆ ಮಾಡುವುದರ ಮೂಲಕ ಜಿಲ್ಲಾ ಉಪನಿರ್ದೇಶಕರು ಸ್ವೀಕೃತಿ ಪ್ರಸ್ತಾವನೆಯನ್ನು ಸಲ್ಲಿಸುತ್ತಾರೆ. ಸದರಿ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ಪಡೆದು ಅಗತ್ಯ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.<br>ಕೇಂದ್ರ ಪುರಸ್ಕೃತ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಹಾಜರಾತಿಯನ್ನು ಪರಿಗಣಿಸಿ, ಅದಕ್ಕನುಗುಣವಾಗಿ ಅವಶ್ಯವಿರುವ ಮೂಲಭೂತ ಸೌಕರ್ಯಗಳ ಬೇಡಿಕೆಯನ್ನು ಸಂಬಂಧಪಟ್ಟ ಜಿಲ್ಲೆಗಳ ಉಪನಿರ್ದೇಶಕರು ಸಿದ್ಧಪಡಿಸಿದ ಪ್ರಸ್ತಾವನೆಗಳನ್ನು ಯೋಜನಾ ಅನುಮೋದನಾ ಮಂಡಳಿಯಲ್ಲಿ ಮಂಡಿಸಿ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಮಂಜೂರಾದ/ಅನುಮೋದನೆಯಾದ ಕಾಮಗಾರಿಗಳಿಗೆ ಆಯಾ ಸಾಲಿನಲ್ಲಿ ಬಿಡುಗಡೆ ಆಗುವ ಅನುದಾನಕ್ಕೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ. |
| ಆ | ಸರಕಾರಿ, ಅರೆ ಸರಕಾರಿ ಸಂಸ್ಥೆಗಳ ಔದ್ಯಮಿಕ ಸಾಮಾಜಿಕ ಬದ್ಧತಾ ನಿಧಿಯನ್ನು (ಸಿಎಸ್‌ಆರ್) ಮತ್ತು ಸ್ಥಳೀಯ ಹಣಕಾಸು ಮತ್ತು ಉದ್ಯಮಿಗಳ ದೇಣಿಗೆಯನ್ನು ಕ್ರೋಢೀಕರಿಸಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಸುಧಾರಣೆ/ಉನ್ನತೀಕರಣ ಮಾಡಲು ಸರಕಾರ ಯಾವ ಕಾರ್ಯ ತಂತ್ರ ರೂಪಿಸಿದೆ;(ವಿವರ ನೀಡುವುದು) | ಸರ್ಕಾರಿ ಶಾಲೆಗಳ ಮೂಲಭೂತ ಸೌಕರ್ಯಗಳ ಸುಧಾರಣೆ/ಉನ್ನತೀಕರಣಕ್ಕಾಗಿ CSR ನಿಧಿಯನ್ನು ಬಳಸಿ ಶಾಲೆಯ ಭೌತಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿ ಕೈಗೊಳ್ಳಲು ಸರ್ಕಾರವು ನಿರ್ಧರಿಸಿರುತ್ತದೆ. 19 ಆಗಸ್ಟ್ 2024 ರಂದು ಈ ಬಗ್ಗೆ CONCLAVE -2024 ಅನ್ನು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಸಿ CSR ನಿಧಿಯನ್ನು ಬಳಸಿ ಶಾಲೆಯ ಸರ್ವತೋಮೂಖ ಅಭಿವೃದ್ಧಿಗೆ ಕೈ ಜೋಡಿಸುವಂತೆ ಕರೆನೀಡಲಾಗಿದೆ. ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ Project Management Unit (PMU) ಸ್ಥಾಪಿಸಿ ಕಂಪನಿಗಳನ್ನು ಆಹ್ವಾನಿಸಿ ಶಾಲಾ-ಕಾಲೇಜುಗಳ ಭೌತಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿ ಕೈಗೊಳ್ಳಲು ಸುತ್ತೋಲೆಯನ್ನು ರಾಜ್ಯ ಕಛೇರಿಯಿಂದ ನೀಡಲಾಗಿದೆ. ಜಿಲ್ಲೆಗಳಲ್ಲಿ PMU ಸ್ಥಾಪನೆ ಕಾರ್ಯ ಹಾಗೂ ಕಂಪನಿಗಳು ಶಾಲೆಗಳನ್ನು ಆಯ್ಕೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ. |

| | | |
|---|---|---|
| ಇ | ಸರಕಾರಿ ಶಾಲೆಗಳಲ್ಲಿ ಈಗ ಒದಗಿಸುತ್ತಿರುವ ಪಠ್ಯ ಪುಸ್ತಕ, ಲೇಖನ ಸಾಮಗ್ರಿ, ಹಾಲು, ಮೊಟ್ಟೆ,ಚಿಕ್ಕಿ, ಬಿಸಿಯೂಟ, ಇತ್ಯಾದಿಗಳ ವಿತರಣೆ ಮತ್ತು ನಿರ್ವಹಣೆಯ ಗುಣಮಟ್ಟವನ್ನು ಹೇಗೆ ಖಾತರಿಪಡಿಸಿಕೊಳ್ಳಲಾಗುತ್ತಿದೆ; ಮೂರನೇ ಪಕ್ಷಗಾರ ಸಂಸ್ಥೆಯಿಂದ ಅಚ್ಚರಿ ತಪಾಸಣೆ (ಸರ್ಪ್ರೈಜ್ ವಿಸಿಟ್) ಮೂಲಕ ಹಿಮ್ಮಾಹಿತಿ ಸಂಗ್ರಹಿಸಿ ವ್ಯವಸ್ಥೆ ಸುಧಾರಣೆಗೆ ಯಾವಾಗ ಕ್ರಮ ವಹಿಸಲಾಗುವುದು; | **ಪಠ್ಯಪುಸ್ತಕ:**-ಶಾಲಾ ಮಕ್ಕಳಿಗೆ ಗುಣಮಟ್ಟದ ಪಠ್ಯಪುಸ್ತಕಗಳನ್ನು ಒದಗಿಸಲು ಕರ್ನಾಟಕ ಪಠ್ಯಪುಸ್ತಕ ಸಂಘವನ್ನು ಸ್ಥಾಪಿಸಲಾಗಿದೆ. ಇದರ ಮೂಲಕ ಮುಂದಿನ ಹಂತಗಳಲ್ಲಿ ಪಠ್ಯಪುಸ್ತಕಗಳ ಗುಣಮಟ್ಟ ಕಾಯ್ದುಕೊಳ್ಳುವ ಹಾಗೂ ವಿತರಣಾ ಕ್ರಮಗಳನ್ನು ಕಾರ್ಯ ನಿರ್ವಹಿಸಲಾಗುತ್ತಿದೆ.<br>**ಅ:** ಬಿಡ್‌ದಾರರು ಸಲ್ಲಿಸುವ ಮಾದರಿ ಕಾಗದ ಹಾಗೂ ಬೋರ್ಡ್ಗಳ ಗುಣಮಟ್ಟ ಪರಿಶೀಲನೆಗೆ ಭಾರತ ಸರ್ಕಾರದ ಸಂಸ್ಥೆಯಾದ CPPRI ಸಹರಾನ್ಪುರ, ಉತ್ತರ ಪ್ರದೇಶ ಇಲ್ಲಿಗೆ ಕಳುಹಿಸಿ ಈ ಕಛೇರಿಯ ನಿರ್ದಿಷ್ಠತೆ ಪ್ರಕಾರ ಗುಣಮಟ್ಟ ಪರಿಶೀಲನೆ ನಡೆಸಿ ವರದಿಯನ್ನು ಪಡೆಯಲಾಗುವುದು. ಅದರಂತೆ ನಿರ್ದಿಷ್ಠತೆಯ ಪ್ರಕಾರ ಇರುವ ಕಾಗದ ಹಾಗೂ ಬೋರ್ಡ್‌ಗಳ ಬ್ರ್ಯಾಂಡ್ ಗಳನ್ನು ಬಳಸಲು ಕಾರ್ಯಾದೇಶದಲ್ಲಿ ನಮೂದಿಸಲಾಗುವುದು.<br>**ಆ:** ಪಠ್ಯಪುಸ್ತಕಗಳು ಮುದ್ರಿಸಿ ಸರಬರಾಜು ಮಾಡುವ ಸಮಯದಲ್ಲಿ ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಈ ಕಛೇರಿಯ ಅಧಿಕಾರಿಗಳು ಗುಣಮಟ್ಟ ಪರಿಶೀಲಿಸಿ ಗುಣಮಟ್ಟ ಪ್ರಮಾಣಪತ್ರವನ್ನು ನೀಡುತ್ತಾರೆ. ಸದರಿ ಪಠ್ಯಪುಸ್ತಕಗಳು ಎಲ್ಲಾ ಜಿಲ್ಲೆಗಳಿಗೆ ಸರಬರಾಜು ಆದ ನಂತರ ತಾಲ್ಲೂಕು ಹಂತದಿಂದ ಪ್ರತಿ ಪ್ಯಾಕೇಜಿನ ಸ್ಯಾಂಪಲ್ ಪುಸ್ತಕಗಳನ್ನು ಪಡೆದು ನಂತರ ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ರವರಿಂದ ಗುಣಮಟ್ಟ ಪರಿಶೀಲಿಸಲಾಗುತ್ತದೆ.<br>**ಮಧ್ಯಾಹ್ನ ಬಿಸಿಯೂಟ ಯೋಜನೆ ಅಡಿಯಲ್ಲಿ ಮೊಟ್ಟೆ/ ಬಾಳೆಹಣ್ಣು/ ಶೇಂಗಾ ಚಿಕ್ಕಿ ಹಾಗೂ ಬಿಸಿಯೂಟದ ವಿತರಣೆಯ ಗುಣಮಟ್ಟ ಖಾತರಿ ಪಡಿಸಿಕೊಳ್ಳಲು ಬಳಸುತ್ತಿರುವ ವಿಧಾನಗಳು**<br>1. ಮಧ್ಯಾಹ್ನ ಬಿಸಿಯೂಟ ಯೋಜನೆ ಅಡಿಯಲ್ಲಿ ವಿತರಿಸುತ್ತಿರುವ ಆಹಾರ ಧಾನ್ಯ ಗಳು ( ಅಕ್ಕಿ ಗೋಧಿ ಮತ್ತು ತೋಗರಿ ಬೇಳೆ) ಮತ್ತು ಅಡುಗೆ ಎಣ್ಣೆಯ ಗುಣ್ಣಮಟ್ಟವನ್ನು ಜಿಲ್ಲಾ ಹಂತದಲ್ಲಿ Assyer ಗಳ ಮೂಲಕ ಜಿಲ್ಲಾ ಪಂಚಾಯಿತಿಗಳ ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳ ಸಮ್ಮುಖದಲ್ಲಿ ಖಾತರಿಪಡಿಸಿಕೊಂಡ ನಂತರ ಶಾಲೆಗಳಿಗೆ ಸರಬರಾಜು ಮಾಡಲಾಗುತ್ತದೆ.<br>2. ಕ್ಷೀರಭಾಗ್ಯ ಯೋಜನೆ ಅಡಿಯಲ್ಲಿ ವಿತರಿಸಲ್ಪಡುವ ಕೆನೆಭರಿತ ಹಾಲಿನ ಪುಡಿಯನ್ನು ಕೆ ಎಂ ಎಫ್ ಸಂಸ್ಥೆಯು ತಮ್ಮ ಹಂತದಲ್ಲಿ ಪ್ರತಿ ಬ್ಯಾಚ್ ಅನ್ನು ಸೂಕ್ಷ್ಮ ಜೀವಿ, ಪೋಷಕಾಂಶಗಳ ಗುಣಮಟ್ಟ ಖಾತರಿಪಡಿಸಿ ಸುರಕ್ಷತೆಯಿಂದ ಕೂಡಿದ ಪ್ಯಾಕೆಟ್ ಗಳಲ್ಲಿ ಸರಬರಾಜು ಮಾಡುತ್ತಿದೆ.<br>3. ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್ ಅನ್ನು ಪ್ರೊಡಕ್ಷನ್ ಹಂತದಲ್ಲಿ ಪ್ರತಿ ಬ್ಯಾಚ್ ಅನ್ನು ಸೂಕ್ಷ್ಮ ಜೀವಿ, ಪೋಷಕಾಂಶಗಳ ಗುಣಮಟ್ಟ ಖಾತರಿ ಪಡಿಸಿ ಸುರಕ್ಷತೆಯಿಂದ ಕೂಡಿದ ಪ್ಯಾಕೆಟ್ ಗಳಲ್ಲಿ ಸರಬರಾಜು ಮಾಡಲಾಗುತ್ತಿದೆ.<br>4. ಮೊಟ್ಟೆಯ ತೂಕವು 50 ಗ್ರಾಂ ಗಿಂತ ಕಡಿಮೆಯಿರಬಾರದು, ಮೊಟ್ಟೆಯ ಮೇಲ್ಮೈ ಸ್ವಚ್ಛವಾಗಿರಬೇಕು ಮತ್ತು ಕೊಳಕು ಮುಕ್ತವಾಗಿರಬೇಕು. ಮೊಟ್ಟೆಯು ಬಿರಕುಗಳು ಇತ್ಯಾದಿ ಮೇಲ್ಮೈ ದೋಷಗಳಿಂದ ಮುಕ್ತವಾಗಿರಬೇಕು.<br>5. ಮೊಟ್ಟೆ ಫ್ಲೋಟ್ ಪರೀಕ್ಷೆ- ಒಂದು ಬಟ್ಟಲಿನಲ್ಲಿ / ಗ್ಲಾಸ್ ನಲ್ಲಿ 4-5 ಇಂಚಿನ ನೀರನ್ನು ತೆಗೆದುಕೊಂಡು ನಿಧಾನವಾಗಿ ಮೊಟ್ಟೆಯನ್ನು ಸೇರಿಸಿದಾಗ ತಾಜಾ ಮೊಟ್ಟೆಯು ಗಾಜಿನ ಕೆಳಭಾಗದಲ್ಲಿ ಫ್ಲಾಟ್ ಆಗಿ ನೆಲೆಸುತ್ತದೆ. ಕೆಟ್ಟ (ಕೊಳೆತ) ಮೊಟೆಗಳು ನೀರಿನ ಮೇಲೆ ತೇಲುತ್ತದೆ.<br>6. ಬೇಯಿಸಿದ ಮೊಟ್ಟೆಗಳ ಸಿಪ್ಪೆ ತೆಗೆಯುವಾಗ, ಯಾವುದೇ ಮೊಟ್ಟೆಗಳು ದುರ್ವಾಸನೆ ಬೀರಿದರೆ ಆ ಮೊಟ್ಟೆಗಳನ್ನು ವಿತರಿಸಬಾರದು.<br>7. ಬೇಯಿಸಿದ ಮೊಟ್ಟೆಯೊಳಗೆ ರಕ್ತದ ಕಲೆಗಳು ಕಂಡು ಬಂದರೆ ಅಂತಹ ಮೊಟ್ಟೆಗಳನ್ನು ಮಕ್ಕಳಿಗೆ ನೀಡಬಾರದು, ಮೊಟ್ಟೆಗಳನ್ನು ತೇವಾಂಶ ಮತ್ತು ಕೆಟ್ಟ ವಾಸನೆಯಿಂದ ರಕ್ಷಿಸಲು ಅವುಗಳನ್ನು ಪೇಪರ್ ಮೊಟ್ಟೆ ಟ್ರೇ ಗಳಲ್ಲಿ ಶೇಖರಿಸಿಡಬೇಕು.<br>8. ಬಾಳೆಹಣ್ಣನ್ನು ಅದೇ ದಿನದ ಬಳಕೆಗಾಗಿ, ಬಾಳೆಹಣ್ಣುಗಳು ಕಂದು ಬಣ್ಣದ ಚುಕ್ಕೆಗಳೊಂದಿಗೆ ಹಳದಿಯಾಗಿರಬೇಕು, ನಂತರ ದಿನಗಳಲ್ಲಿ ಬಳಸುವುದಿದ್ದಲ್ಲಿ, ಸ್ವಲ್ಪ ಹಸಿರು ಮತ್ತು ಹೆಚ್ಚು ಹಸಿರು ಇಲ್ಲದ ಬಾಳೆಹಣ್ಣು ಗಳನ್ನು ಆರಿಸಿ, ನೇರ ಸೂರ್ಯನ ಬೆಳಕಿನಿಂದ ದೂರವಿರುವ ತಂಪಾದ |

| | | |
|---|---|---|
| | | ಮತ್ತು ಶುಷ್ಕ ಸ್ಥಳದಲ್ಲಿ ಬಾಳೆಹಣ್ಣುಗಳನ್ನು ಸಂಗ್ರಹಿಸಿಡಬೇಕು.<br>9. ಶೇಂಗಾ ಚಿಕ್ಕಿಯ ತೂಕ 35-45 ಗ್ರಾಂ ಇರಬೇಕು, ಉದ್ದ 2 ಇಂಚು , ಅಗಲ 2 ಇಂಚು ಮತ್ತು ದಪ್ಪ ½ ಇಂಚು ಹೊಂದಿರಬೇಕು. ಶೇಂಗಾ ಚಿಕ್ಕಿಯು ಒಂದಕ್ಕೊಂದು ಅಂಟಿಕೊಳ್ಳಬಾರದು ಮತ್ತು ಕೆಟ್ಟ ವಾಸನೆಯನ್ನು ಹೊಂದಿರಬಾರದು ಅಥವಾ ಯಾವುದೇ ಬಣ್ಣದ ಬಳಕೆಯಿಂದ ಮುಕ್ತವಾಗಿರಬೇಕು . ಚಿಕ್ಕಿಯನ್ನು ತಂಪಾದ ಮತ್ತು ಶುಷ್ಕ ಸ್ಥಳದಲ್ಲಿ ಸಂಗ್ರಹಿಸಬೇಕು. ಈ ಮೇಲೆ ವಿವರಿಸಿದಂತೆ ಗುಣಮಟ್ಟ ಪರೀಕ್ಷೆಗಳನ್ನು ಶಾಲೆಯಲ್ಲಿ ನಿರ್ವಹಿಸಲು ಸುತ್ತೋಲೆ ಹಾಗೂ ತರಬೇತಿಗಳನ್ನು ನೀಡಲಾಗಿದೆ.<br>10. ಪ್ರತಿ ವರ್ಷ ಆಯ್ದ 300 ಶಾಲೆಗಳಲ್ಲಿ ಆಹಾರ ಪರೀಕ್ಷೆಯಲ್ಲಿ ಪೋಷಕಾಂಶಗಳ ಪರೀಕ್ಷೆ, ಸೂಕ್ಷ್ಮ ಜೀವಿಗಳ ಪರೀಕ್ಷೆ ಮಾಡಿಸಲಾಗುತ್ತಿದೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಪ್ರತಿ 3 ತಿಂಗಳಿಗೊಮ್ಮೆ ಆಹಾರ ಪರೀಕ್ಷೆ ಮಾಡಿಸಿ ವರದಿಗಳನ್ನು ಸಲ್ಲಿಸುತ್ತಾರೆ.<br>11. ಪ್ರತಿ ವರ್ಷವೂ ಶಾಲಾ ಹಂತದಲ್ಲಿ ಗ್ರಾಮೀಣಾಭಿವೃದ್ಧಿಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಕಾರದೊಂದಿಗೆ ನೀರಿನ ಪರೀಕ್ಷೆ ಮಾಡಿಸಲಾಗುತ್ತಿದೆ.<br>12. ಪ್ರತಿ ವರ್ಷವು ಆಯ್ದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 3rd Party evaluation ಅಧ್ಯಯನವನ್ನು ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಕೈಗೊಳ್ಳಲಾಗುತ್ತದೆ. ಪಿ.ಎಂ.ಪೋಷಣ್ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಆಯ್ದ ಶಾಲೆಗಳಲ್ಲಿ ಮೌಲ್ಯಮಾಪನ ಮೂಲಕ ಕೈಗೊಳ್ಳಲಾಗುತ್ತಿದೆ. |
| ಈ | ಶಾಲೆಗಳಲ್ಲಿ ಪಠ್ಯ ಚಟುವಟಿಕೆ ಜೊತೆಗೆ ಕೃಷಿ, ಕೈಗಾರಿಕೆ, ಬ್ಯಾಂಕ್ ಹಾಗೂ ಆಡಳಿತ ಕುರಿತಂತೆ ಮತ್ತು ಇತರ ಲಲಿತ ಕಲೆಗಳಾದ ಭರತನಾಟ್ಯ, ಸಂಗೀತ, ವಾದ್ಯ ಪರಿಕರಗಳು ಹಾಗೂ ಜೀವನಾವಶ್ಯಕ ಆರೋಗ್ಯ ಮತ್ತು ಆಹಾರ ಸುರಕ್ಷತೆ, ಜೀವ ಸುರಕ್ಷತೆ, ಇತ್ಯಾದಿಗಳನ್ನು ಸರಳವಾಗಿ ಪರಿಚಯಿಸಿ ಖಾಸಗಿ ಶಾಲೆಗಳ ವಿದ್ಯಾರ್ಥಿಗಳೊಂದಿಗೆ ಸಮ ಸ್ಪರ್ಧಿಯಾಗಿಸುವ ಬಗ್ಗೆ ಸರಕಾರ ಏನೇನು ಕ್ರಮ ವಹಿಸುತ್ತಿದೆ?(ವಿವರ ನೀಡುವುದು) | ಶಾಲೆಗಳಲ್ಲಿ ಪಠ್ಯ ಚಟುವಟಿಕೆ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಉತ್ತೇಜಿಸಲು ಕೇಂದ್ರ ಪ್ರಾಯೋಜಿತ ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆಯ Nodal agency ಯಾಗಿ DSERT ಯು ಕಾರ್ಯ ನಿರ್ವಹಿಸುತ್ತಿದೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಶಾಲಾ ವಿದ್ಯಾರ್ಥಿಗಳಿಗೆ ಅವಶ್ಯಕ ವಯಸ್ಸಿನಲ್ಲಿ ಶೈಕ್ಷಣಿಕ ಕಲಿಕೆಯೊಂದಿಗೆ, ಜೀವನ ಕೌಶ್ಯಲಗಳನ್ನು ಬೆಳೆಸಿ, ಜಾಗೃತಿ ಮೂಡಿಸುವುದರ ಮೂಲಕ ಆರೋಗ್ಯಕರ ಸಮಾಜದ ವಾತಾವರಣ ಸೃಷ್ಟಿಸುವುದಾಗಿರುತ್ತದೆ. NCERT ಯವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮದ ಮೂಲಕ ಹದಿಹರೆಯದ ವಿದ್ಯಾರ್ಥಿಗಳಲ್ಲಿ ಸ್ವಯಂ ನಿಭಾಯಿಸುವ ಮತ್ತು ಮಾನಸಿಕ ಒತ್ತಡವನ್ನು ನಿರ್ವಹಿಸಲು ವಿವಿಧ ಜೀವನ ಕೌಶಲ್ಯಗಳನ್ನು ಅನ್ವಯಿಸುವ, ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಲಾಗುತ್ತದೆ. ಶಾಲೆಗಳಲ್ಲಿ ಮಕ್ಕಳ ನಡವಳಿಕೆ ಹಾಗೂ ಜೀವನ ಕೌಶಲದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ಥೀಮ್ ಆಧಾರಿತ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. NPEP ಯಡಿ ಶಾಲೆಗಳಲ್ಲಿ ಪಾತ್ರಾಭಿನಯ, ಜಾನಪದ ನೃತ್ಯ, ಪೋಸ್ಟರ್ ಬರೆಯುವ ಸ್ಪರ್ಧೆ, ಚರ್ಚಾ ಕೂಟ, ಪ್ರಬಂಧ ಬರಹ, ಚಿತ್ರಕಲೆ, ತಜ್ಞರಿಂದ ಸಮಾಲೋಚನೆ (expert talk) ಮುಂತಾದ ಪಠ್ಯ ಪೂರಕ ಸಹಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. |

**ಸಂಖ್ಯೆ: ಇಪಿ 48 ಇಜಿಓವಿ 2024**

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು